# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:20-11-2021 ರಂದು ಬೆಳಿಗ್ಗೆ:- 11:00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೇಗೂರು ವಾರ್ಡ್ ಸಂಖ್ಯೆ-192 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ನೀಲಕಂಠಯ್ಯ.ಕೆ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಸಮ್ಮುಖದಲ್ಲಿ ಅವರ ಅನುಮತಿಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ಪ್ರಾರಂಭದಲ್ಲಿ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಚಲುವರಾಜು.ಎಸ್. ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ-192 ಬೇಗೂರು ರವರು ಸಭೆಗೆ ಹಾಜರಾಗಿದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಕೋವಿಡ್-19 ಮಹಾಮಾರಿ ಸಾಂಕ್ರಮಿಕ ರೋಗ ಹರಡದಂತೆ ಮುಂಜಾಗ್ರತವಾಗಿ ತೆಗೆದುಕೊಳ್ಳಬಹುದಾದ ಕ್ರಮಗಳು.
2. ವಿಪತ್ತು ನಿರ್ವಹಣಾ ಸಮಿತಿ (Disaster Management Committee) ನಿರ್ವಹಿಸಬೇಕಾದ ಕ್ರಮಗಳ ಕುರಿತು.
3. ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವುದು.
4. ವಾರ್ಡಿನ ಕುಂದುಕೊರತೆಗಳ ಬಗ್ಗೆ ಚರ್ಚಿಸುವುದು.
5. ಮುಂಗಾರು ಮಳೆಯಿಂದ ಸಂಭವಿಸಿದ/ಸಂಭವಿಸಬಹುದಾದ ಅನಾಹುತಗಳ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸುವುದು.

**ವಾರ್ಡ್ ನಂ 192 ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದವರು**

| ಕ್ರ.ಸಂ | ಹೆಸರು | ಹುದ್ದೆ | |
|---|---|---|---|
| 1 | ಶ್ರೀ.ನೀಲಕಂಠಯ್ಯ.ಕೆ.ಪಿ. | ಅಧ್ಯಕ್ಷರು/ನೋಡೆಲ್ ಅಧಿಕಾರಿಗಳು | 9845989978 |
| 2 | ಶ್ರೀ.ಚಲುವರಾಜು.ಎಸ್. | ಕಾರ್ಯದರ್ಶಿ (ಕಿ.ಅ.) | 9620687103 |
| 3 | ಶ್ರೀ.ಆರ್.ಕುಮಾರ್ | ಬೆಸ್ಕಾಂ. ಸ.ಕಾ.ಅ. | 9449844670 |
| 4 | ಶ್ರೀ.ರಮೇಶ್ | ಸ.ಕಾ.ಅ. ಬೀದಿ ದೀಪ ಇಲಾಖೆ | 9986835425 |
| 5 | ಶ್ರೀ.ಸಂತೋಷ್ ದೀಪು | ಅರಣ್ಯ | 8884324927 |
| 6 | ಶ್ರೀ.ರಮೇಶ್.ಎಲ್. | ಕಿ.ಆ.ಪ. | 9902785690 |
| 7 | ಶ್ರೀ.ಶ್ರೀಧರ್.ಎಸ್. | ಹಿ.ಆ.ಪ | 9739453414 |

| | | | |
|---|---|---|---|
| 8 | ಶ್ರೀ.ರಾಜೇಂದ್ರ ರೆಡ್ಡಿ | ಸದಸ್ಯರು | 9986490283 |
| 9 | ಶ್ರೀ.ಮಂಜುನಾಥ | ಸದಸ್ಯರು | 9845680018 |
| 10 | ಶ್ರೀ.ರಮೇಶ್ | ಸದಸ್ಯರು | 9035515888 |

## ಸಭೆಯ ನಡವಳಿಗಳು

1. ಪ್ರಪ್ರಥಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ರೋಗದ ಬಗ್ಗೆ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ನೀಲಕಂಠಯ್ಯ.ಕೆ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಚರ್ಚಿಸಿದರು. ಕೋವಿಡ್-19 ಸಂಬಂಧ ಮುಂಜಾಗ್ರತ ಕ್ರಮವಾಗಿ ಸರಿಯಾದ ಸಮಯಕ್ಕೆ ಚುಚ್ಚುಮದ್ದು ಹಾಕಿಸಿಕೊಳ್ಳಲು ಹಾಗೂ ಮಾಸ್ಕ್‌ಗಳನ್ನು ಬಳಸಲು ಮತ್ತು ಅಂತರ ಕಾಪಾಡಿಕೊಳ್ಳಲು ಸಭೆಯಲ್ಲಿ ಸೂಚಿಸಿರು

2. ವಾರ್ಡ್ ವ್ಯಾಪ್ತಿಯ ಸೆಂಟ್ರಲ್ ಎಕ್ಸೈಸ್ ಬಡಾವಣೆಯಲ್ಲಿ ಮತ್ತು ದೊಡ್ಡಕಮ್ಮನಹಳ್ಳಿಯ ಮುಖ್ಯರಸ್ತೆಯಿಂದ ನೈಸ್ ರಸ್ತೆರ ವರೆಗೆ ರಸ್ತೆಗಳಲ್ಲಿ ಗುಂಡಿಗಳು ಉಂಟಾಗಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ತಕ್ಷಣವೇ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಉಪಸ್ಥಿತರಿದ್ದ ಸದರಿ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಮಾನ್ಯ ವಾರ್ಡ್ ಸಮಿತಿ ನೋಡಲ್ ಅಧಿಕಾರಿಗಳು ಸೂಚಿಸಿದರು.

3. ವಾರ್ಡ್ ವ್ಯಾಪ್ತಿಯ ಸೆಂಟ್ರಲ್ ಎಕ್ಸೈಸ್ ಬಡಾವಣೆಯಲ್ಲಿ ಮತ್ತು ಟಿ.ಜಾನ್ ಕಾಲೇಜು ರಸ್ತೆಯ ಇಕ್ಕೆಲಗಳಲ್ಲಿ ಸರಿಯಾದ ಬೀದಿ ದೀಪದ ವ್ಯವಸ್ಥೆಯಿರುವುದಿಲ್ಲ ವೆಂದು ಸಭೆಯಲ್ಲಿ ಸಾರ್ವಜನಿಕರು ದೂರಿದರು ಇದರ ಬಗ್ಗೆ ಕ್ರಮವಹಿಸಲು ಮಾನ್ಯ ವಾರ್ಡ್ ಸಮಿತಿ ನೋಡಲ್ ಅಧಿಕಾರಿಗಳು ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯ ಸೆಂಟ್ರಲ್ ಎಕ್ಸೈಸ್ ಬಡಾವಣೆಯಲ್ಲಿ ಕಾವೇರಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲವೆಂದು ಸಭೆಯಲ್ಲಿ ಸದರಿ ಪ್ರದೇಶದ ಜನರು ದೂರಿದರು ಮಾನ್ಯ ವಾರ್ಡ್ ಸಮಿತಿ ನೋಡಲ್ ಅಧಿಕಾರಿಗಳು ಇದರ ಬಗ್ಗೆ ಕ್ರಮವಹಿಸುವುದಾಗಿ ಹಾಗೂ ಅತೀ ಶೀಘ್ರದಲ್ಲಿ ಪರಿಹರಿಸುವುದಾಗಿ ತಿಳಿಸಿದರು.

5. ವಾರ್ಡ್ ವ್ಯಾಪ್ತಿಯ ಸೆಂಟ್ರಲ್ ಎಕ್ಸೈಸ್ ಬಡಾವಣೆಯಲ್ಲಿ ಮತ್ತು ವಿಶ್ವಪ್ರಿಯ ಬಡಾವಣೆ, ಒಣಕಸ ಸಂಗ್ರಹಣೆ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹಾಗೂ ಸದರಿ ಪ್ರದೇಶದಲ್ಲಿ ಕಸಗಳು ರಸ್ತೆಯಲ್ಲಿ ಉಳಿದಿದ್ದು ಸರಿಯಾದ ಸ್ವಚ್ಛತೆ ಕಾರ್ಯನಿರ್ವಹಿಸುತ್ತಿಲ್ಲವೆಂದು ಸದರಿ ಪ್ರದೇಶದ ಸಾರ್ವಜನಿಕರು ಸಭೆಯಲ್ಲಿ ದೂರಿದರು ಈ ಸಮಸ್ಯೆಯ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು

6. ವಾರ್ಡ್ ವ್ಯಾಪ್ತಿಯಲ್ಲಿ ಅತೀಯಾಗಿ ಪ್ಲಾಸ್ಟಿಕ್ ಬಳಸುತ್ತಿರುವುದಾಗಿ ದೂರುಗಳು ಬಂದಿದ್ದು ಈ ಸಮಸ್ಯೆಯ ಬಗೆಹರಿಸಲು ವಾರ್ಡ್ ವ್ಯಾಪ್ತಿಯಲ್ಲಿರುವ ಅಂಗಡಿಗಳ ಮಾಲೀಕರಿಗೆ ಎಚ್ಚರಿಕೆ ನೀಡಲು ಹಾಗು ಸಾಧ್ಯವಾದಲ್ಲಿ ಪೈನ್‌ಗಳನ್ನು ಹಾಕಲು ಸಭೆಯಲ್ಲಿ ಉಪಸ್ಥಿತರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ವಾರ್ಡ್ ಸಮಿತಿ ನೋಡಲ್ ಅಧಿಕಾರಿಗಳು ಸೂಚಿಸಿದರು.

7. ವಾರ್ಡ್ ವ್ಯಾಪ್ತಿಯ ವಿಶ್ವಪ್ರಿಯಾ ಬಡಾವಣೆಯಲ್ಲಿ ಚರಂಡಿಗಳಲ್ಲಿ ಹೂಳು ತುಂಬಿದ್ದು ಮಳೆಯ ನೀರು ಸರಾಗವಾಗಿ ಹರಿಯದೇ ರಸ್ತೆಯ ಮೇಲೆ ಹರಿದು ಸಾರ್ವಜನಿಕರು ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗಿರುತ್ತದೆ ಎಂದು ದೂರಿದರು. ಸಭೆಯಲ್ಲಿ ಉಪಸ್ಥಿತರಿದ್ದ ಸಹಾಯಕ ಅಭಿಯಂತರರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ವಾರ್ಡ್ ಸಮಿತಿ ನೋಡಲ್ ಅಧಿಕಾರಿಗಳು ಸೂಚಿಸಿದರು.

8. ಸದರಿ ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಕಂಬಗಳ ಅವಶ್ಯಕತೆಯಿದ್ದು ಅವುಗಳ ಅಗತ್ಯತೆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಸಭೆಯಲ್ಲಿ ಉಪಸ್ಥಿತರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

<u>**ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**</u>

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ -192 ಬೇಗೂರು

ಅಧ್ಯಕ್ಷರು
ವಾರ್ಡ್ ಕಮಿಟಿ ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ-192, ಬೇಗೂರು

**ಪ್ರತಿಗಳು:-**

1) ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ.
2) ಉಪ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ
3) ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ಉಪವಿಭಾಗ ರವರ ಅವಗಾಹನೆಗೆ ಮಂಡಿಸಿದೆ
4) ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.
5) ಕಛೇರಿ ಕಡತಕ್ಕೆ